MYSORE LEGISLATIVE ASSEMBLY

FIFTY-FIFTH DAY.

Friday, 20th September 1963.

The House met in the Assembly Hall, Vidhana Soudha, Bangalore, at Twelve of the Clock.

MR. SPEAKER (SRI B. VAIKUNTA BALIGA, B.A., B.L.), in the Chair.

STARRED QUESTION

(to which oral answers were given)

Payment of Amelioration Grant to the Depressed Class people for the Construction of Houses.

*Q.— 379. **Sri B. NANJAPPA** (Cubbonpet).—

Will the Government be pleased to state :—

(*a*) whether it is a fact that the payment of Amelioration Grant to the Depressed Class people for the construction of houses has been discontinued ;

(*b*) whether action would be taken for the restoration of the grant to them, so that they could get monetary relief for the construction of houses ?

*A.—**Smt. YASHODARA DASAPPA** (Minister for Social Welfare).—

(*a*) Yes.

(*b*) It is a suggestion for consideration.

ಶ್ರೀ ಬಿ. ನಂಜಪ್ಪ.—ಈಗ ಗ್ರಾಂಟನ್ನು ನಿಲ್ಲಿಸಿರುವುದರಿಂದ ಹರಿಜನರಿಗೆ ಬಹಳ ತೊಂದರೆ ಆಗಿದೆ ಎಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀಮತಿ ಯಶೋಧರ ದಾಸಪ್ಪ.—ಬಂದಿದೆ.

ಶ್ರೀ ಬಿ. ನಂಜಪ್ಪ.—ಸದರಿ ಸೌಲಭ್ಯಗಳನ್ನು ಈಗ ನಿಲ್ಲಿಸಿರುವುದರಿಂದ ಹರಿಜನರಿಗೆ ಬಹಳ ತೊಂದರೆಯಾಗಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ಆ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ ಎಂದು ಆಗಲೇ ಹೇಳಿದೆ.

ಶ್ರೀ ಜಿ. ವಿ. ಗೌಡ.—ಎಷ್ಟು ಜನರಿಗೆ ಮನೆಯಿಲ್ಲ ಎಂಬುದನ್ನು ಸರ್ವೆ ಮಾಡಿಸಿದ್ದೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಇಲ್ಲ. ಅನೇಕ ಜನರಿಗೆ ಮನೆಗಳಿಲ್ಲ ಎಂಬ ವಿಚಾರ ಗೊತ್ತಿದೆ. ಅದಕ್ಕಾಗಿ ಮೊದಲನೆಯ ಪ್ಲಾನಿನಲ್ಲಿ 135 ಲಕ್ಷ ರೂಪಾಯಿಗಳನ್ನು ಮಾಸಲಾಗಿಡಲಾಗಿತ್ತು. ಈಗಾಗಲೆ 138 ಲಕ್ಷ ರೂಪಾಯಿಗಳು ಖರ್ಚಾಗಿವೆ. ಆದರೆ ಕೆಲವು ಅರ್ಧಮರ್ಧ ಕಟ್ಟಡಗಳಾಗಿ ಹಾಗೆ ನಿಂತುಹೋಗಿದ್ದವು, ಅವುಗಳನ್ನು ಪೂರ್ತಿಮಾಡಲು ಎರಡನೆಯ ಯೋಜನೆಯ ಆಖೈರಿನಲ್ಲಿ ಸುಮಾರು 18 ಲಕ್ಷ ರೂಪಾಯಿಗಳನ್ನು ಪುನಃ ಕೊಡಲಾಗಿದೆ. ಆದರೆ ಈಗ ಇನ್ನೂ 13 ಲಕ್ಷ ರೂಪಾಯಿಗಳು ಬೇಕೆಂಬುದಾಗಿ ಕೇಳುತ್ತಿದ್ದಾರೆ. ಅಂತೂ ಇಲ್ಲಿಯವರೆಗೆ ಇಷ್ಟು ಹಣ ಖರ್ಚಾಗಿದೆ.

Indicates that the remarks or speeches have not been revised by the member concerned.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಹಿಂದೆ ತಾವು ಇವರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಸಹಕಾರ ಸಂಘಗಳ ಮೂಲಕ ಹಣವನ್ನು ಕೊಡಲಾಗುತ್ತದೆಂದು ತಿಳಿಸಿದ್ದಿರಿ—ಈಗ ಎಲ್ಲ ತಾಲ್ಲೂಕು ಗಳಲ್ಲೂ ಸಹಕಾರ ಸಂಘಗಳನ್ನು ಸ್ಥಾಪಿಸಲು ಏನು ಕಾರ್ಯಕ್ರಮ ಕೈಗೊಂಡಿದ್ದೀರಿ ?

ಶ್ರೀಮತಿ ಯಶೋಧರ ದಾಸಪ್ಪ.—ಈಗ ಸರ್ವಜನಿಕ ಸೊಸೈಟಿಗಳಲ್ಲೇ ಇವರಿಗೂ ಹಣ ಕೊಡಲಾಗುತ್ತಿದೆ. ಆದರೆ ಇವರಿಗಾಗೇ ಪ್ರತ್ಯೇಕ ಸೊಸೈಟಿಗಳನ್ನು ಸ್ಥಾಪನೆ ಮಾಡಿ 1,500 ರೂಪಾಯಿಗಳಿಂದ 3,000 ರೂಪಾಯಿಗಳವರೆಗೂ ಸಾಲ ಕೊಡಬೇಕೆಂದು ಎಲ್. ಐ. ಸಿ. ಅವರನ್ನು ಹಣ ಕೇಳಿದ್ದೇವೆ. ಈಗ ಕೊಡುತ್ತಿರುವ ಸಬ್‌ಸಿಡಿಯಿಂದ ಮನೆಗಳಾಗುವುದು ಕಷ್ಟ. ಇಲ್ಲಿಯವರೆಗೂ ಕೊಡುತ್ತಿದ್ದ ಹಣ ಒಂದು ವ್ಯವಸ್ಥಿತ ರೀತಿಯಲ್ಲಿ ಖರ್ಚಾಗುತ್ತಿರಲಿಲ್ಲ. ಆದುದ ರಿಂದ ಇನ್ನುಮೇಲೆ ಇವರಿಗೆ ಸೊಸೈಟಿಗಳ ಮೂಲಕ ಹಣ ಕೊಡಬೇಕೆಂದು ಮಾಡಿದ್ದೇವೆ.

ಶ್ರೀ ಕೆ. ವಿ. ಬೈರೇಗೌಡ.—ಈ ಸಂಘಗಳೀಗ ಸ್ಥಾಪನೆಯಾಗಿವೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ಹಣವಿನ್ನೂ ದೊರೆತಿಲ್ಲ. ಅದರಿಂದ ಸೊಸೈಟಿಗಳಿನ್ನೂ ರಿಜಿಷ್ಟ್ರಿಗಿಲ್ಲ.

ಶ್ರೀ ಬಿ. ನಂಜಪ್ಪ.—ಈಗ ಬೆಂಗಳೂರಿನಲ್ಲಿ ಹರಿಜನರಿಗೆ ಲೀಜ್ ಮೇಲೆ ಜಾಗಗಳನ್ನು ಕೊಡ ಲಾಗಿದೆ. ಆ ಸೈಟುಗಳ ಪರಿಣಾಮ ಯಾವ ರೀತಿ ಆಗುತ್ತದೆ ?

ಶ್ರೀಮತಿ ಯಶೋಧರ ದಾಸಪ್ಪ.—ಸರ್ಕಾರದಿಂದ ಅರ್ಧ ಮತ್ತು ಕಾರ್ಪೊರೇಷನ್ನಿನವರು ಅರ್ಧ ಹಣ ಹಾಕಿ ಕಟ್ಟಿಸಿಕೊಡಬೇಕೆಂದಿದೆ. ಸ್ಕ್ಯಾವೆಂಜರುಗಳಿಗೆ ಬೇರೆ ಸ್ಕೀಮಿದೆ. ಆದರ ಬೇರೆ ಕಡೆ ಇತರ ಪಟ್ಟಣಗಳಲ್ಲಿ ಹೀಗೆ ಸೈಟುಗಳನ್ನು ತೆಗೆದುಕೊಡಲು ಸಾಧ್ಯವಿಲ್ಲ. ಅವರಿಗೆಲ್ಲ ಬೇರೆ ರೀತಿ ಏರ್ಪಾಡನ್ನು ಮಾಡಲಾಗುತ್ತದೆ.

ಶ್ರೀ ಗಾಂಜೀವೀರಪ್ಪ.—ಒಂದು ಗ್ರಾಮಕ್ಕೆ ಒಂದೇ ಸೊಸೈಟಿ ಇರಬೇಕೆಂಬ ನಿರ್ಬಂಧ ವಿದೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ಇಲ್ಲ.

ಶ್ರೀ ಜಿ. ರಾಮೇಗೌಡ.—ಎಷ್ಟು ಸೊಸೈಟಿಗಳನ್ನು ಮಾಡಬೇಕೆಂದಿದ್ದೀರಿ ?

ಶ್ರೀಮತಿ ಯಶೋಧರ ದಾಸಪ್ಪ.—80-100 ಆಗಬಹುದು.

ಶ್ರೀ ಡಿ. ಎಂ. ಸಿದ್ದಯ್ಯ.—ಎಷ್ಟು ದಿವಸಗಳಲ್ಲಿ ಈ ಕೆಲಸವನ್ನು ಪೂರೈಸುತ್ತೀರಿ ?

ಶ್ರೀಮತಿ ಯಶೋಧರ ದಾಸಪ್ಪ.—2-3 ತಿಂಗಳಿಂದಲೂ ಹಣದ ನಿರೀಕ್ಷಣೆಯಲ್ಲಿದ್ದೇವೆ. ಹಣ ಬಂದಕೂಡಲೇ ಮಾಡಲಾಗುತ್ತದೆ.

ಶ್ರೀ ಬಿ. ನಂಜಪ್ಪ.—ನಾನಾಗಲೇ ಕೇಳಿದ ಪ್ರಶ್ನೆ ಏನೆಂದರೆ, ಕಾರ್ಪೊರೇಷನ್ ನೌಕರರಿಗೆ ಸೈಟುಗಳನ್ನು ಕೊಟ್ಟಿಲ್ಲ. ಬೇರೆ ಹರಿಜನರಿಗೆ ಲೀಜ್ ಮಾಡಿದ್ದಾರೆ. ಇದನ್ನು ಯಾವ ರೀತಿ ವ್ಯವಸ್ಥೆ ಮಾಡುತ್ತೀರಿ ?

ಶ್ರೀಮತಿ ಯಶೋಧರ ದಾಸಪ್ಪ.—ಬೇರೆಯವರಿಗೆಲ್ಲ ಯಾವ ರೀತಿ ದೊರೆತಿದೆಯೋ ಅದೇ ರೀತಿ ಇವರೂ ತೆಗೆದುಕೊಳ್ಳಬೇಕು. ಕೇಂದ್ರ ಸರ್ಕಾರಕ್ಕೆ ಸ್ಪೆಷಲ್ ರೋನಿಗಾಗಿ ಬರೆದುಕೊಂಡಿ ದ್ದೇವೆ. ಹಣವಿನ್ನೂ ಬಂದಿಲ್ಲ.

ಶ್ರೀ ಎಂ. ಸಿ. ಬನಪ್ಪ.—ಈ ಯೋಜನೆಗಾಗಿ ಬಡ್ಜೆಟ್ಟಿನಲ್ಲಿ ಎಷ್ಟು ಹಣವನ್ನಿಟ್ಟಿದ್ದೀರಿ ?

ಶ್ರೀಮತಿ ಯಶೋಧರ ದಾಸಪ್ಪ.—ಸೊಸೈಟಿಗಳೇ ಇನ್ನೂ ಸ್ಥಾಪಿತವಾಗಿಲ್ಲ.

ಶ್ರೀ ಎಂ. ಸಿ. ಬನಪ್ಪ.—ಹಾಗಾದರೆ ಸೊಸೈಟಿಗಳು ಯಾವ ರೀತಿ ಕೆಲಸ ಮಾಡಬೇಕು ?

ಶ್ರೀಮತಿ ಯಶೋಧರ ದಾಸಪ್ಪ.—ಹಣವಿನ್ನೂ ಬಂದಿಲ್ಲ. ಬಂದಕೂಡಲೆ ಏರ್ಪಾಡು ಮಾಡ ಲಾಗುತ್ತದೆ.

ಶ್ರೀ ಡಿ. ಮುನಿಚಿನ್ನಪ್ಪ.—ಈ ಸೊಸೈಟಿಗಳು ಸ್ಥಾಪಿತವಾಗುವವರೆಗೂ ಹಿಂದೆ ಇದ್ದ 400 ರೂಪಾಯಿಗಳ ಸಬ್‌ಸಿಡಿಯನ್ನು ಕೊಡಲು ಮತ್ತೆ ಏರ್ಪಾಡು ಮಾಡುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ನಮ್ಮ ಸರ್ಕಾರ ಇದನ್ನು ಬೇಡ ಎಂದು ಹೇಳಿ ಪ್ಲಾನಿನಲ್ಲ ಸೇರಿಸಿಲ್ಲ. ಈಗ ಆ ರೀತಿ ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಈಗತಾನೆ ಅರ್ಧಮರ್ಧ ಕಟ್ಟಿರತಕ್ಕ ಮನೆಗಳಿಗೆ ಹಣ ವನ್ನು ಕೊಡಲಾಗುವುದೆಂದು ತಿಳಿಸೋಣವಾಯಿತು. ನಮ್ಮ ತುಮಕೂರಿಗೆ ಎಷ್ಟು ಹಣವನು ಕೊಟ್ಟಿದ್ದೀರಿ ?

ಶ್ರೀಮತಿ ಯಶೋಧರ ದಾಸಪ್ಪ.—13 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಜಿಲ್ಲಾವಾರು ಅಂಕಿಗಳು ನನ್ನಲ್ಲಿಲ್ಲ.

ಶ್ರೀ ಅಂದಾನಯ್ಯ.—ಸಾಲ ಕೊಡತಕ್ಕ ಬಗ್ಗೆ ರೀತಿ ನೀತಿಗಳೇನು ?

ಶ್ರೀಮತಿ ಯಶೋಧರ ದಾಸಪ್ಪ.—ಅವರು ಷೇರ್ ಹೋಲ್ಡರುಗಳಾಗಬೇಕು. ಆಗ ಅವರಿಗೆ 1,500 ರಿಂದ 3,000 ರೂಪಾಯಿಗಳವರೆಗೆ ಸಾಲ ಸಿಕ್ಕುತ್ತದೆ.

ಶ್ರೀ ಡಿ. ಎಂ. ಸಿದ್ದಯ್ಯ.—ಈಗ ಅರ್ಧಮರ್ಧ ಕಟ್ಟಿರತಕ್ಕ ಮನೆಗಳನ್ನು ಪೂರ್ತಿಮಾಡಲು ಏನು ಕಾರ್ಯಕ್ರಮ ಕೈಗೊಂಡಿದ್ದೀರಿ ?

ಶ್ರೀಮತಿ ಯಶೋಧರ ದಾಸಪ್ಪ.—13 ಲಕ್ಷ ರೂಪಾಯಿಗಳು ಬೇಕೆಂದು ಕೇಳಿದ್ದಾರೆ. ಕೇಂದ್ರದಿಂದ ಹಣ ಬಂದರೆ ಅವುಗಳನ್ನು ಪೂರ್ತಿಮಾಡಲು ಸಹಾಯ ಮಾಡಬೇಕೆಂಬ ಆಸೆ ಸರ್ಕಾರಕ್ಕಿದೆ.

Total extent of tank bed land under Bhoosamudra tank in Nagamangala Taluk.

*Q.—489. **Sri T. N. MADAPPA GOWDA** (Nagamangala).—

Will the Government be pleased to state :—

(*a*) The total extent of tank bed land under the Bhoosamudra tank in Nagamangala Taluk ;

(*b*) the present and the previous extent thereof ;

(*c*) whether it is a fact that the tank bed land has been allotted to ryots for cultivation ;

(*d*) whether they intended to supply water to the atchkat of the above tank and if so, the steps taken in this regard ?

*A.—**Sri M. V. KRISHNAPPA** (Minister for Revenue).—

(*a*) 41.25 acres.

(*b*) Present extent : 21.25 acres.
Previous extent : 41.25 acres.

(*c*) The tank bed which is in the limits of Honkere kaval has been sold to ryots for cultivation by authorities of the Palace to whom it belongs.

(*d*) Yes. A scheme for effecting improvements to the waste weir and channels is being considered.

ಶ್ರೀ ಟಿ. ಎನ್. ಮಾದಪ್ಪಗೌಡ.—ಈ ಕೆರೆಯ ಅಚ್ಚುಕಟ್ಟುದಾರರಿಗೆ ಈ ರೀತಿ ಭೂಮಿಯನ್ನು ಮಾರಿದುದರಿಂದ ತೊಂದರೆಯಾಗಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು ಇದು ಕೆರೆಯ ಅಂಗಳ. ಇದರಲ್ಲಿದ್ದ 41 ಎಕರೆಗಳಲ್ಲಿ 21 ಎಕರೆ ಚಿಲ್ಲರೆಯಷ್ಟು ಭೂಮಿ ಅರಮನೆಗೆ ಸೇರಿದ್ದು. ಅದರಿಂದಾಗಿ ಅರಮನೆ ಇಲಾಖೆಯವರೇ ಇದನ್ನು ಮಾರಿಬಿಟ್ಟಿದ್ದಾರೆ. ಸರ್ಕಾರದವರು ಈ ಬಗ್ಗೆ ಏನೂ ಮಾಡುವಂತಿಲ್ಲ. ಬಹುಶಃ ನಾನೇ ಆಕ್ಸ್ಚೇರ್ ಮಾಡಿಕೊಳ್ಳಬೇಕಾಗುತ್ತದೆ ಎಂದರೆ ಅದಕ್ಕೆ ಬಹಳ ಹೆಚ್ಚಿನ ದುಡ್ಡು ಖರ್ಚಾಗುತ್ತದೆ. ಅದರಿಂದ ಏನು ಮಾಡಬೇಕು ಎನ್ನುವುದನ್ನು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಟಿ. ಎನ್. ಮಾದಪ್ಪಗೌಡ.—ಇಲ್ಲಿರುವ 380 ಎಕರೆಗಳಲ್ಲಿ ನೂರು ಎಕರೆಗಳಿಗೂ ನೀರು ಬರುತ್ತಿಲ್ಲ. ಹಾಗಿದ್ದರೂ ಇಲ್ಲಿನ ರೈತರಿಂದ ತರಿ ಕಂದಾಯವನ್ನು ವಸೂಲು ಮಾಡುತ್ತಿದ್ದಾರೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ರೈತರಿಗೆ ನೀರು ಕೊಡದೆ ತರಿ ಕಂದಾಯ ವಸೂಲು ಮಾಡುತ್ತಿದ್ದರೆ ಅದು ಬೇರೆ ಪ್ರಶ್ನೆ. ಅದನ್ನು ಸರ್ಕಾರ ಗಮನಕ್ಕೆ ತೆಗೆದುಕೊಂಡು ಏನು ಪರಿಹಾರ ಕೊಡಬಹುದೋ ಅದನ್ನು ಲ್ಯಾಂಡು ಅಕ್ವಿಸಿಷನ್ನು ಆಕ್ಟಿನಂತೆ ಕೊಡಬಹುದು. ಆದರೆ ಇದರ ಪೂರ್ತಿ ಸರ್ವೇ ನಂಬರು ಅರಮನೆಗೆ ಸೇರಿದ್ದು. ಅವರೇ ಇದನ್ನು ಮಾರಿಬಿಟ್ಟಿದ್ದಾರೆ. ಹಿಂದೆ ಅರಮನೆಗೆ ಸೇರಿದ್ದ ಭೂಮಿಯನ್ನು ಮಾರಿದರೆ ಅದರ ಮೇಲೆ ನಾವೇನೂ ಮಾಡುವಂತಿರಲಿಲ್ಲ. ಸರ್ಕಾರದವರು ಬೇಕಾದರೆ ಅದನ್ನು ಆಕ್ಸ್ಚೇರ್ ಮಾಡಿಕೊಳ್ಳಬಹುದು ; ಇಲ್ಲದಿದ್ದರೆ ಇಲ್ಲ.